2. ಬೈಂದೂರು		
ವಿಧಾನಸಭಾ ಕ್ಷೇತ್ರ	4,441	1,050
ಒಟ್ಟು	**7,803**	**1,574**
ಸಿ)	ನಮೂನೆ – 50	ನಮೂನೆ – 53
1. ಕುಂದಾಪುರ	159	12,566
2. ಬೈಂದೂರು	147	14,131
ಒಟ್ಟು	**306**	**26,697**

ಅಕ್ರಮ ಜಮೀನು ಸಕ್ರಮೀಕರಣಗೊಳಿಸುವ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

4308(4998) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಕ್ರಮ – ಜಮೀನು ಸಕ್ರಮೀಕರಣಗೊಳಿಸುವ ಬಗ್ಗೆ ಅರ್ಜಿ ಸಲ್ಲಿಸಲು ಮಾಹಿತಿಯ ಕೊರತೆಯಿಂದ ಬಹಳಷ್ಟು ಗ್ರಾಮಸ್ಥರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಬಂದಿದ್ದಲ್ಲಿ, ಅರ್ಜಿ ಸಲ್ಲಿಸಲು ಮನಃ ಅವಕಾಶ ಒದಗಿಸಲಾಗುವುದೇ :

ಇ) ಅವಕಾಶ ನೀಡುವುದಾದಲ್ಲಿ ಯಾವ ದಿನಾಂಕದಿಂದ ಎಲ್ಲಿಯವರೆಗೆ ಅವಕಾಶ ನೀಡಲಾಗುವುದು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಈ ಬಗ್ಗೆ ಸರ್ಕಾರಕ್ಕೆ ಬಂದಿರುವ ಮನವಿ ಪರಿಶೀಲನೆಯಲ್ಲಿದೆ.

ಆ) –– " ––

ಇ) –– " ––

ರಾಜ್ಯದ ಅರಣ್ಯಗಳಲ್ಲಿ ಹಾಳಾಗುತ್ತಿರುವ ಮರಗಳ ಉಪಯೋಗ

4309(4999) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅರಣ್ಯಗಳಲ್ಲಿ ಹಳೇ ಮರಗಳು ಬಿದ್ದು, ಉಪಯೋಗಕ್ಕೆ ಬಾರದೆ ರಾಷ್ಟ್ರೀಯ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸದರಿ ಮರಗಳು ಕುಸಿದು ಬಿದ್ದು ಹಾಳಾಗುವ ಮೊದಲೇ ಅವುಗಳನ್ನು ಪತ್ತೆ ಮಾಡಿ, ಕಾಲಮಿತಿ ಅವಧಿಯೊಳಗೆ ಸುಧಾರಣೆ ದರದಲ್ಲಿ ಬಡವರು ಮನೆ ಕಟ್ಟುವಾಗ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ : ಈ ವಿಷಯದಲ್ಲಿ ಸರ್ಕಾರದ ನಿಲುವೇನು ;

ಇ) ಸದರಿ ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರುವ ಉದ್ದೇಶ ಸರಕಾರಕ್ಕಿದೆಯೇ : ಇದ್ದಲ್ಲಿ, ಯಾವಾಗ ತರಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ

ಸಾರ್ವಜನಿಕರಿಗೆ ಮನೆ ನಿರ್ಮಾಣಕ್ಕಾಗಿ ಕೋರಿಕೆ ಪತ್ರಗಳು ಬಂದಾಗ, ನಿಗದಿತ ಚಿಲ್ಲರೆ ಮಾರಾಟ ದರದಲ್ಲಿ ಸರ್ಕಾರಿ ನಾಟಾ ಸಂಗ್ರಹಾಲಯದಿಂದ ನೀಡಲಾಗುವುದು.

ಇ) ಉದ್ಭವಿಸುವುದಿಲ್ಲ.